## MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಪ್ರಚಾರ ಮತ್ತು ಜಾಹೀರಾತು (Publicity & Propaganda) ಅನುಷ್ಠಾನ ಮಾರ್ಗಸೂಚಿ

### 1. ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :

MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಪ್ರಚಾರ ಮತ್ತು ಜಾಹೀರಾತು (Publicity & Propaganda) ಕಾರ್ಯಕ್ರಮದಡಿ, ತೋಟಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿವಿಧ ವಿಚಾರ ಸಂಕಿರಣ, ಸಮ್ಮೇಳನಗಳು, ಕಾರ್ಯಾಗಾರಗಳು, ಜೇನುಮೇಳಗಳು, ಫಲಪುಷ್ಪ ಪ್ರದರ್ಶನಗಳು, ತೋಟಗಾರಿಕೆ ಮೇಳಗಳು, ಜಾಹೀರಾತುಗಳು ಇತ್ಯಾದಿಗಳಿಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

### 2. ಕಾರ್ಯಕ್ರಮದ ಉದ್ದೇಶಗಳು :

ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಹಾಗೂ ಮಾರುಕಟ್ಟೆ ಕುರಿತು ಅಗತ್ಯವಾದ ಪೂರಕ ಸೌಲಭ್ಯಗಳನ್ನು ಮತ್ತು ಹೊಸ ತಾಂತ್ರಿಕ ಹಾಗೂ ಯಾಂತ್ರಿಕ ಆವಿಷ್ಕಾರಗಳ ಕುರಿತು ಮಾಹಿತಿ ಒದಗಿಸಲು ವಿವಿಧ ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಜೇನುಮೇಳಗಳು, ಫಲಪುಷ್ಪ ಪ್ರದರ್ಶನಗಳು, ತೋಟಗಾರಿಕೆ ಮೇಳಗಳು, ಜಾಹೀರಾತುಗಳು ನೀಡಲು ಹಾಗೂ ಸಾರ್ವಜನಿಕ ಮತ್ತು ಖಾಸಗಿ ವಲಯದ ಸಂಘ-ಸಂಸ್ಥೆಗಳಿಗೆ ಅನುದಾನ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

### 3. ತಾಂತ್ರಿಕ ವೈಶಿಷ್ಟತೆಗಳು :

ಪ್ರಚಾರ ಮತ್ತು ಜಾಹೀರಾತು ಕಾರ್ಯಕ್ರಮದಡಿ, ತೋಟಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿವಿಧ ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಜೇನುಮೇಳಗಳು, ಫಲಪುಷ್ಪ ಪ್ರದರ್ಶನಗಳು, ತೋಟಗಾರಿಕೆ ಮೇಳಗಳನ್ನು ಆಯೋಜಿಸುವುದು, ಜಾಹೀರಾತುಗಳನ್ನು ನೀಡುವುದು ಇವುಗಳು ಈ ಯೋಜನೆಯ ಮುಖ್ಯ ಕಾರ್ಯಕ್ರಮವಾಗಿರುತ್ತದೆ.

### 4. ಸಹಾಯಧನ ಪಡೆಯಲು ಇರಬೇಕಾದ ಅರ್ಹತೆ:

- ಈ ಕಾರ್ಯಕ್ರಮದಡಿ ರಾಷ್ಟ್ರಮಟ್ಟದ ಕಾರ್ಯಕ್ರಮಗಳಿಗೆ ರೂ. 5.00 ಲಕ್ಷಗಳು, ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ರೂ. 3.00 ಲಕ್ಷಗಳು ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಿಗೆ ರೂ. 2.00 ಲಕ್ಷಗಳ ಅನುದಾನ ನೀಡಲು ಅವಕಾಶ ಇರುತ್ತದೆ.
- ಈ ಕಾರ್ಯಕ್ರಮದಡಿ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಾಗ ಪ್ರಸ್ತಾವನೆಯೊಂದಿಗೆ ಕಾರ್ಯಕ್ರಮದ ಉದ್ದೇಶದ ಕುರಿತು ವಿವರವಾದ ಟಿಪ್ಪಣಿಯನ್ನು ನೀಡಬೇಕಾಗಿರುತ್ತದೆ.
- ಉದ್ದೇಶಿತ ಕಾರ್ಯಕ್ರಮದಿಂದ ಕನಿಷ್ಠ 100 ರೈತರು ಮತ್ತು ಕ್ಷೇತ್ರಮಟ್ಟದ ಅಧಿಕಾರಿಗಳು ಪ್ರಯೋಜನ ಪಡೆಯುವಂತಿರಬೇಕು.
- ಸಾರ್ವಜನಿಕ ವಲಯದ ಸಂಘಟನೆಗಳು ಆಯೋಜಿಸುವ ಕಾರ್ಯಕ್ರಮಗಳಿಗೆ ಇಲಾಖೆಯ ಕಾರ್ಯ ಚಟುವಟಿಕೆಗಳಿಗೆ ಸಹಕಾರ ಆಗುವಂತಿದ್ದರೆ ಮಾತ್ರವೇ ಆದ್ಯತೆ ನೀಡಬೇಕಾಗಿರುತ್ತದೆ.
- ಕಾರ್ಯಕ್ರಮ ಆಯೋಜಿಸುವ ಸಂಘಟನೆಯು ಉದ್ದೇಶಿತ ಕಾರ್ಯಕ್ರಮ ಆಯೋಜಿಸಲು ವೆಚ್ಚವನ್ನು ಭರಿಸುವ ಮೂಲಗಳ ಬಗ್ಗೆ ವಿವರಗಳನ್ನು ನೀಡಬೇಕಾಗಿರುತ್ತದೆ. ಇಲಾಖೆಯಿಂದ ನೀಡುವ ಮೊತ್ತ ಹೊರತುಪಡಿಸಿ, ಉಳಿದ ಮೊತ್ತವನ್ನು ಸಂಘಟಕರು ಭರಿಸುವಂತಿರಬೇಕು.

- ಪ್ರಸ್ತಾವನೆ ಸಲ್ಲಿಸುವ ಸಂಘಟನೆ ಹಿಂದಿನ ವರ್ಷಗಳಲ್ಲಿ ಇಂತಹ ಕಾರ್ಯಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
- ಪ್ರಸ್ತಾವನೆ ಸಲ್ಲಿಸುವ ಖಾಸಗಿ ಸಂಘ/ಸಂಸ್ಥೆಗಳು, ಸಹಕಾರಿ/ನೋಂದಾಯಿತ ಸಂಸ್ಥೆಗಳಾಗಿದ್ದು, ತೋಟಗಾರಿಕೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.

**5. ಸಹಾಯಧನ ವಿತರಣೆ:**

- ಮಂಜೂರಾತಿ ಆದೇಶದ ನಿಬಂಧನೆಗಳ ಪ್ರಕಾರ ಉದ್ದೇಶಿತ ಕಾರ್ಯಕ್ರಮವು ಯಶಸ್ವಿಯಾಗಿ ಪೂರ್ಣಗೊಂಡಿರುವುದರ ಬಗ್ಗೆ ದೃಢೀಕರಿಸಿಕೊಂಡ ನಂತರ ಸಂಘಟಕರಿಂದ ವಿಡಿಯೋ, ಛಾಯಾಚಿತ್ರಗಳು ಇತ್ಯಾದಿ ದಾಖಲೆಗಳನ್ನು ಪಡೆದುಕೊಂಡ ನಂತರ ಸಹಾಯಧನವನ್ನು ಬಿಡುಗಡೆ ಮಾಡಬೇಕು.
- ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು ಸಂಬಂಧಿಸಿದ ಸಂಘ/ಸಂಸ್ಥೆಯ ಬ್ಯಾಂಕ್ ಖಾತೆಗೆ ನಿಯಮಾನುಸಾರ ಸಹಾಯಧನವನ್ನು ಪಾವತಿಸತಕ್ಕದ್ದು.
- ಕಾರ್ಯಕ್ರಮ ಪೂರ್ಣಗೊಂಡ ಬಳಿಕ ಹಣ ಬಳಕೆ ಪ್ರಮಾಣ ಪತ್ರ (UC), ಛಾಯಾಚಿತ್ರಗಳು ಮತ್ತು ಪ್ರಗತಿ ವರದಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

**6. ಆರ್ಥಿಕ ಪ್ರತ್ಯಾಯೋಜನೆ (Delegation of Power):**

ಈ ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಪ್ರಸ್ತಾವನೆಗೆ ಮಂಜೂರಾತಿ ನೀಡಲು ತೋಟಗಾರಿಕೆ ಉಪ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

**7. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation):**

ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು **ಕ.ರಾ.ತೋ.ಮಿ.ಏ.ಬೆಂಗಳೂರು** ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು. **2022-23 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.**

ಮುಂದಿನ ಆದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.

**ಮಿಷನ್ ನಿರ್ದೇಶಕರು**

**ಮತ್ತು**

**ತೋಟಗಾರಿಕೆ ನಿರ್ದೇಶಕರು**